ಬೆಳೆಯುವುದು ನಿಜವೇ? ಹೀಗೆ ನನ್ನ ಮನಸ್ಸಿನ ತುಂಬಾ ಆ ಹಾವೇ ತುಂಬಿಕೊಂಡಿತ್ತು. ದೂರದಲ್ಲಿ ಕುರುಚಲು ಪೊದೆಗಳ ನಡುವೆ ಇದ್ದ ಮರವೊಂದನ್ನು ತೋರಿಸಿದ ಗಂಗಿರೆಡ್ಡಿ, ''ನೋಡಿ ಭಾವ, ಹಾವನ್ನ ಆ ಮರದ ಬುಡದಲ್ಲಿ ಬಚ್ಚಿಟ್ಟಿದೀನಿ...'' ಎಂದು ಒಂದು ದಿಕ್ಕಿನ ಕಡೆಗೆ ಬೆರಳು ತೋರಿಸಿದ. ಒಂದು ಕ್ಷಣ ಮೈ ಜುಮ್ ಎಂದಿತು. ಮೂರ್ನಾಲ್ಕು ದಿನದ ಹಿಂದಿನವರೆಗೂ ಯಾವ ನಿರೀಕ್ಷೆಯೂ ಇಲ್ಲದ ಆದಾಯ ಈಗ ನನ್ನದಾಗಲಿದೆ. ಅದನ್ನ ತಂದು ಕೊಡುವ ಭಾಗ್ಯನಿಧಿ ಆ ಮರದ ಬುಡದಲ್ಲಿದೆ. ಮರದತ್ತ ಒಂದೊಂದೇ ಹೆಜ್ಜೆ ಹಾಕುತ್ತ ಹಾಕುತ್ತ ಒಂದು ರೀತಿಯ ಥ್ರಿಲ್ ಅನುಭವಿಸಿದೆ. ಮರದ ಬಳಿ ಕರೆದೊಯ್ದ ಗಂಗಿರೆಡ್ಡಿ ಮರದ ಬುಡಕ್ಕೆ ಹೋಗಿ ಚೀಲ ಹಿಡಿದೆತ್ತಿದವನು ಗರಬಡಿದವನಂತೆ ಹಗುರವಾದ ಚೀಲ ಒದರುತ್ತ, ''ಅಯ್ಯೋ ದೇವ್ರೇ... ಇದ್ರಲ್ಲೇ ಹಾವಿಟ್ಟಿದ್ದೆ... ಈಗ ಹಾವಿಲ್ಲ'' ಎಂದ. ಆ ಚೀಲವನ್ನು ಅವನಿಂದ ತಕ್ಷಣ ಕಸಿದುಕೊಂಡು ನಾನೂ ಒಮ್ಮೆ ಅದನ್ನು ಒದರಿದೆ. ಹಾವಿಲ್ಲ ಎಂಬುದು ಖಾತ್ರಿಯಾಗುತ್ತಿದ್ದಂತೆ ನನ್ನ ಉತ್ಸಾಹವೆಲ್ಲ ಒಮ್ಮೆಗೇ ಆವಿಯಾದಂತಾಗಿ ನಿಲ್ಲಲೂ ಶಕ್ತಿಯಿಲ್ಲದವನಂತೆ ಅಲ್ಲೇ ಕುಸಿದು ಕೂತೆ. ಗಂಗಿರೆಡ್ಡಿ ಹಾವಿಲ್ಲದ ಚೀಲವನ್ನು ವಿವಿಧ ಬಗೆಯಲ್ಲಿ ಕೊಡವುತ್ತಲೇ ಇದ್ದ. ''ಬೆಳಿಗ್ಗೆ ತಾನೇ ನೋಡ್ಕೊಂಡು ಹೋಗಿದ್ದೆ, ಈಗೆಲ್ಲಿ ಹೋಯ್ತು?'' ಎನ್ನುತ್ತ ಅವನು ಸುತ್ತಲಿನ ಪೊದೆಗಳನ್ನು ಸರಿಸಿ ಹುಡುಕುತ್ತಿದ್ದ. ಕಟ್ಟಿದ ಆಸೆಯ ಗೋಪುರ ನೆಲಕ್ಕುರುಳಿತ್ತು. ದುಡ್ಡು ಬಂದೊಡನೆ ತೀರಿಸಬೇಕೆಂದಿದ್ದ ಒಂದೊಂದೇ ಬೇಡಿಕೆಗಳು ಒಂದೊಂದು ಆಕಾರ ಪಡೆದು ಕೇಕೆ ಹಾಕಿ ನಗುತ್ತ ಮತ್ತಷ್ಟು ಬೃಹದಾಕಾರವಾಗಿ ಬೆಳೆಯುತ್ತ, ನನ್ನನ್ನು ಅಣಕಿಸಿದಂತಾಯ್ತು.

★★★

ಇದೆಲ್ಲ ಆಗಿ ಇಪ್ಪತ್ತು ದಿನಗಳು ಕಳೆದಿದ್ದವು. ಹಾವಿನ ಬೆನ್ನುಹತ್ತಿ ಎಲ್ಲ ಕೆಲಸಗಳು ಹಿಂದುಮುಂದಾಗಿದ್ದವು. ತಿಂಗಳಿಗೆ ಒಂದು ವಾರ ಮಾತ್ರ ಕೆಲಸವಿರುವ ಒಂದು ಟೀವಿ ಧಾರಾವಾಹಿಗೆ ಚಿತ್ರಕತೆ ಬರೆಯುವುದರಲ್ಲಿ ನಿರತನಾಗಿದ್ದೆ. ಮೊಬೈಲ್ ರಿಂಗಾಯಿತು. ಮೊಬೈಲ್ ಡಿಸ್‌ಪ್ಲೇ ಮೇಲೆ ಶೇಷಾಚಲಂರಾಜು ಎಂಬ ಹೆಸರು ಕಣ್ಣಿಗೆ ರಾಚುತ್ತಿದ್ದ ಹಾಗೆ ಕೊಂಚ ಕಸಿವಿಸಿಯಾದರೂ ಕಾಲ್ ರಿಸೀವ್ ಮಾಡಿದೆ. ಆ ಬದಿಯಿಂದ ಶೇಷು, ''ಸಾರ್, ಹೇಗಿದ್ದೀರಿ? ಏನೋ ಆಗಿದ್ದು ಆಗೋಯ್ತು. 'ರೈಸ್‌ಪುಲ್ಲರ್' ಹೆಸರು ಕೇಳಿದೀರ? ಸಿಡಿಲು ಬಡಿದಿರೋ ದೇವಸ್ಥಾನದ ಕಳಸ, ಅಥವಾ ಸಿಡಿಲು ಬಡಿದಿರೋ ಕಲ್ಲು... ನೂರುಕೋಟಿ ಡೀಲ್ ಸಾರ್...'' ಎಂದೊಡನೆ ನಖಶಿಖಾಂತ ಉರಿದುಹೋಗಿ, ''ಒಳ್ಳೇ ಮಾತಲ್ಲಿ ಫೋನ್ ಇಟ್ರೆ ಒಳ್ಳೇದು ಶೇಷು... ಪ್ಲೀಸ್...'' ಎಂದು ಕಿರುಚಿದೆ. ಮರುಕ್ಷಣವೇ... ಅತ್ತ ಲೈನ್ ಡಿಸ್‌ಕನೆಕ್ಟ್ ಮಾಡಿದ ಬೀಪ್ ಸೌಂಡ್ ಕೇಳಿಸತೊಡಗಿತು...


## ಗಜೇಂದ್ರ ಗುಂಜೂರ್

ಲೇಖಕರು ಬೆಂಗಳೂರಿನ ಹೊರವಲಯದ ಗುಂಜೂರಿನವರು. ಸಿನಿಮಾ ಹಾಗೂ ಧಾರಾವಾಹಿಗಳಿಗೆ ಕತೆ, ಚಿತ್ರಕತೆ, ಸಂಭಾಷಣೆ ಬರೆಯುವುದು ವೃತ್ತಿ ಮತ್ತು ಪ್ರವೃತ್ತಿ. ಪ್ರಬಂಧ, ಕತೆಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ. 'ಅನು', 'ಮಡಿವಾಳ ಮಾಚಿದೇವ' ಸಿನಿಮಾಗಳಿಗೆ ಸಂಭಾಷಣೆ, ಗೀತೆಗಳನ್ನು ಬರೆದಿದ್ದಾರೆ.